ರಾಜ್ಯದಲ್ಲಿ ರೈತರ ಪಂಪ್‌ಸೆಟ್‌ಗಳ ವಿದ್ಯುತ್ ಜೋಡಣೆಗೆ ಠೇವಣಿ ಹೆಚ್ಚಳ.

2316(2900) ಶ್ರೀ ಬಸವಂತರೆಡ್ಡಿ ಮೊತಕಪಲ್ಲಿ (ಸೇಡಂ) :— ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕರ್ನಾಟಕ ರಾಜ್ಯದಲ್ಲಿ ರೈತರ ಪಂಪ್‌ಸೆಟ್ಟುಗಳ ವಿದ್ಯುತ್ ಜೋಡಣೆಗಾಗಿ ರೂ. 2500-00 ಠೇವಣಿಯ ಹಣದ ಬದಲು ರೂ. 25,000-00 ಠೇವಣಿ ಹಣ ನಿಗದಿ ಮಾಡಿರುವುದರಿಂದ ರೈತರಿಗೆ ತೊಂದರೆಯುಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಇಂತಹ ಹೆಚ್ಚಿನ ಮೊತ್ತದ ಹಣವನ್ನು ಠೇವಣಿ ಮಾಡಲು ರೈತನಿಗೆ ಅಸಾಧ್ಯವಾಗುವುದಿಲ್ಲವೆ? ಪಂಪುಸೆಟ್‌ಗಾಗಿ ವಿದ್ಯುಚ್ಛಕ್ತಿ ಪಡೆಯಲು ರೈತ ಭೂಮಿ ಮಾರಾಟ ಮಾಡಿದರೆ ಮಾತ್ರ ಈ ವಿದ್ಯುಚ್ಛಕ್ತಿ ಪಡೆಯಬಹುದಲ್ಲವೇ?

ಇ) ಇದರಿಂದ ಕಾನೂನು ಪ್ರಕಾರ ವಿದ್ಯುಚ್ಛಕ್ತಿ ಪಡೆಯುವ ಬದಲು ಇಲಾಖೆಯವರು ಬಡ ರೈತರೊಂದಿಗೆ ಕೂಡಿ ಕಾನೂನುಬಾಹಿರ ವಿದ್ಯುತ್ ಜೋಡಣೆ ಕೊಡುವುದು ನಿಜವಲ್ಲವೇ?

ಈ) ಆದಕ್ಕಾಗಿ ಮೊದಲಿನಂತೆ 2500-00 ರೂ. ಠೇವಣಿ ನಿಗದಿ ಮಾಡಿ ರೈತರಿಗೆ ಅನುಕೂಲ ಹಾಗೂ ಕಾನೂನು ಬಾಹಿರ ಜೋಡಣೆಗಳನ್ನು ತೆಗೆದುಕೊಳ್ಳದಂತೆ ವ್ಯವಸ್ಥೆ ಮಾಡಬಹುದಲ್ಲವೇ?

ಶ್ರೀ ವೀರಕುಮಾರ ಆ. ಪಾಟೀಲ್ (ಇಂಧನ ರಾಜ್ಯ ಸಚಿವರು) :—

ಅ) ಆ) ಮತ್ತು ಇ)

ಈ ಹಿಂದೆ ಸ್ವಯಂ ಆರ್ಥಿಕ ನೆರವಿನ ಯೋಜನೆಯಡಿ ಕೇವಲ ಸರ್ವೀಸ್ ಮೈನ್‌ಗಳ ಮೂಲಕ ವಿದ್ಯುತ್ ಸಂಪರ್ಕ ಕಲ್ಪಿಸಲಾಗುವ ನೀರಾವರಿ ಪಂಪುಸೆಟ್ಟುಗಳ ಅರ್ಜಿದಾರರುಗಳಿಂದ ರೂ. 2500-00ಗಳನ್ನು ಪಾವತಿಸಿಕೊಂಡು ವಿದ್ಯುತ್ ಸಂಪರ್ಕ ಕಲ್ಪಿಸಲಾಗಿತ್ತು. ಈಗ ಸ್ವಯಂ ಆರ್ಥಿಕ ನೆರವಿನ ಯೋಜನೆಯನ್ನು ರದ್ದುಪಡಿಸಲಾಗಿದ್ದು, "ತತ್ಕಾಲ್" ಯೋಜನೆಯನ್ನು ಜಾರಿಗೊಳಿಸಲಾಗಿರುತ್ತದೆ. ಈ ಯೋಜನೆಯ ಅನ್ವಯ ಕೇವಲ ಸರ್ವೀಸ್ ಮೈನ್‌ಗಳ ಮೂಲಕ ವಿದ್ಯುತ್ ಸಂಪರ್ಕ ಪಡೆಯುವ ನೀರಾವರಿ ಪಂಪುಸೆಟ್ಟು ಬಳಕೆದಾರರು ರೂ. 25,000 ಮೊತ್ತವನ್ನು ನೀಡಬೇಕಾಗಿರುತ್ತದೆ. "ತತ್ಕಾಲ್" ಯೋಜನೆಯು ಸಂಪೂರ್ಣವಾಗಿ ಐಚ್ಛಿಕವಾಗಿರುತ್ತದೆ.

ಇ) ಯಾವುದೇ ಅನಧಿಕೃತ ವಿದ್ಯುತ್ ಜೋಡಣೆಯ ಪ್ರಕರಣಗಳು ನಿಗಮದ ಗಮನಕ್ಕೆ ಬಂದಲ್ಲಿ ಅವುಗಳ ವಿದ್ಯುತ್ ಸಂಪರ್ಕವನ್ನು ಕಡಿದು ಹಾಕಲಾಗುತ್ತಿದೆ.

ಈ) ಈ ಹಿಂದೆ ಜಾರಿಯಲ್ಲಿದ್ದ 'ಸ್ವಯಂ ಆರ್ಥಿಕ ನೆರವು ಯೋಜನೆ' ಯನ್ನು ರದ್ದುಗೊಳಿಸಿ, ರಾಜ್ಯಾದ್ಯಂತ ಬಿಳಿ ತಾಲ್ಲೂಕುಗಳಿಗೆ ಅನ್ವಯವಾಗುವಂತೆ ಒಂದೇ ರೀತಿಯಲ್ಲಿ "ತತ್ಕಾಲ್" ಯೋಜನೆಯನ್ನು 1-4-2001 ರಿಂದ ಜಾರಿಗೊಳಿಸಲಾಗಿದೆ. ಆದ್ದರಿಂದ ಸ್ವಯಂ ಆರ್ಥಿಕ ನೆರವು ಯೋಜನೆಯನ್ನು ಮತ್ತೆ ಜಾರಿಗೆ ತರುವ ಪ್ರಸ್ತಾವನೆ ಪ್ರಸ್ತುತ ಪರಿಶೀಲನೆಯಲ್ಲಿ ಇರುವುದಿಲ್ಲ.

ಚಿತ್ತಾಪುರ ತಾಲ್ಲೂಕಿನಲ್ಲಿ ಹರಿಜನ ಬಸ್ತಿಗಳಿಗೆ ಟ್ಯೂಬ್‌ಲೈಟ್ ವ್ಯವಸ್ಥೆ ಮಾಡುವುದು.

2347(2901) ಶ್ರೀ ಬಸವಂತರೆಡ್ಡಿ ಮೊತಕಪಲ್ಲಿ (ಸೇಡಂ) :— ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ಕ್ಷೇತ್ರದ (ಚಿತ್ತಾಪುರ ತಾಲ್ಲೂಕಿನ 11 ಗ್ರಾಮಗಳು ಹಾಗೂ ತಾಂಡಾಗಳು ಕೂಡಿ) ಗ್ರಾಮಗಳ ಹರಿಜನ ಬಸ್ತಿಗಳಿಗೆ ವಿದ್ಯುಚ್ಛಕ್ತಿ ಇಲಾಖೆಯ ವತಿಯಿಂದ ನಿಗದಿಪಡಿಸಿರುವ ಟ್ಯೂಬ್‌ಲೈಟ್‌ಗಳು ಹಾಕದೇ ಅವ್ಯವಹಾರ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಕ್ಷೇತ್ರದಲ್ಲಿ ವಿದ್ಯುತ್ ಪ್ರಸರಣ ಇಲಾಖೆಯವರು ದಾಖಲಾತಿ ಪ್ರಕಾರ ಯಾವ ಯಾವ ಗ್ರಾಮಗಳ ಹರಿಜನ ಬಸ್ತಿಗಳಿಗೆ ಟ್ಯೂಬ್‌ಲೈಟ್‌ಗಳ ಜೋಡಣೆ ಮಾಡಿದ್ದಾರೆ?

ಇ) ಮಾಡಿದ್ದಲ್ಲಿ ಕಾರಣವೇನು? ಹಾಗೂ ಹರಿಜನ ವಾಡಗಳಿಗೆ ಟ್ಯೂಬ್‌ಲೈಟ್ ವ್ಯವಸ್ಥೆ ಮಾಡಲಾಗುವುದೇ?

ಶ್ರೀ ವೀರಕುಮಾರ್ ಅ. ಪಾಟೀಲ್ (ಇಂಧನ ರಾಜ್ಯ ಸಚಿವರು) :—

ಅ) ಈ ವಿಚಾರದಲ್ಲಿ ಯಾವುದೇ ಅವ್ಯವಹಾರ ನಡೆದಿರುವುದಿಲ್ಲ.

ಆ) 1) ಅಡಕಿ 2) ರಂಜೋಳ 3) ಕೋತಂಪಲ್ಲಿ 4) ಎಮ್ಮಪಲ್ಲಿ 5) ದುಗನೂರ ಹರಿಜನ ಬಸ್ತಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ.

ಇ) ಉದ್ಭವಿಸುವುದಿಲ್ಲ.